

# ಮೊಬೈಲ್ ಫೋನ್ ಸಂಗ್ರಹಾಲಯ





ಸ್ಮಾರ್ಟ್‌ಫೋನ್‌ನ ವಿವಿಧ ಮಾದರಿಗಳು ಒಂದರ ಹಿಂದೆ ಒಂದರಂತೆ ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಇವುಗಳ ಮಧ್ಯೆ ಹಳೆಯ ಮಾದರಿಯ ಬೇಸಿಕ್ ಮೊಬೈಲ್ ಫೋನ್‌ಗಳು ಅಸ್ತಿತ್ವವನ್ನೇ ಕಳೆದುಕೊಂಡು ಬಿಟ್ಟಿವೆ ಎನ್ನಬಹುದು. ಆದರೆ ಈ ವಿಂಟೇಜ್ ಫೋನ್ ಬಗ್ಗೆ ಮೋಹ ಇಟ್ಟುಕೊಂಡವರಿಗೆ, ಹಳೆಯ ಸುಮಧುರ ನೆನಪುಗಳನ್ನು ಮತ್ತೆ ಮತ್ತೆ ಕೆದಕುವವರಿಗೆ ಸ್ಲೊವಾಕಿಯಾದ ಆನ್‌ಲೈನ್ ಮಾರುಕಟ್ಟೆ ತಜ್ಞನೊಬ್ಬ ವಸ್ತು ಸಂಗ್ರಹಾಲಯ ತೆರೆದು ಭಾವನಾ ಪ್ರಪಂಚದಲ್ಲಿ ಮುಳುಗಿಸುತ್ತಿದ್ದಾನೆ.

ಆತನೇ 26ರ ಹರೆಯದ ತಂತ್ರಜ್ಞ ಸ್ಟೀಫನ್ ಪೊಲ್ಗಾರಿ. ಸ್ಲೊವಾಕಿಯಾದ ಡೊಬ್ಸಿನಾ ನಗರದ ಈತ ಎರಡು ವರ್ಷಗಳ ಹಿಂದೆ ಹಳೆಯ ಫೋನ್‌ಗಳ ಹುಡುಕಾಟದಲ್ಲಿ ತೊಡಗಿದ. ಈತನ ಬಳಿ ಇಂದು 3500ಕ್ಕೂ ಅಧಿಕ ವಿಂಟೇಜ್ ಫೋನ್‌ಗಳಿವೆ. 1500ಕ್ಕೂ ಹೆಚ್ಚು ಮಾದರಿಗಳು. ತನ್ನ ಮನೆಯ ಕೊಠಡಿಗಳನ್ನೇ ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸಿದ ಸ್ಟೀಫನ್, ಆನ್‌ಲೈನ್‌ನಲ್ಲಿ ಹಳೆಯ ಮೊಬೈಲ್ ಫೋನ್‌ಗಳನ್ನು ಖರೀದಿಸಿದ. ನೋಕಿಯ, ಇಟ್ಟಿಗೆಯಂತಹ 20 ವರ್ಷಗಳಷ್ಟು ಹಳೆಯದಾದ ಸೀಮನ್ಸ್ ಫೋನ್, ಇತ್ತೀಚೆಗೆ ಅಪ್‌ಡೇಟ್ ಆಗಿ ಪುನಃ ಬಿಡುಗಡೆಗೊಂಡ ನೋಕಿಯ 3310... ಎಲ್ಲವೂ ಟಚ್‌ಸ್ಕ್ರೀನ್ ತಂತ್ರಜ್ಞಾನ ಬರುವುದಕ್ಕಿಂತ ಪೂರ್ವದಲ್ಲಿದ್ದ ಫೋನ್‌ಗಳೇ. ಕೆಲವು ಫೋನ್‌ಗಳಂತೂ ಈಗಿನ ಕಾಂಪ್ಯಾಕ್ಟ್ ಕಂಪ್ಯೂಟರ್‌ಗಿಂತ ಭಾರವಾದವು. ಸದ್ಯ ಮೊದಲೇ ಅಪಾಯಿಂಟ್‌ಮೆಂಟ್ ಪಡೆದವರಿಗೆ ಮಾತ್ರ ವಸ್ತು ಸಂಗ್ರಹಾಲಯ ನೋಡುವ ಅವಕಾಶ ಇದೆಯಂತೆ.

■ ಎಸ್.ಹೆಗಡೆ